ಅಂಗನವಾಡಿ : ಮಕ್ಕಳ ಸರ್ವತೋಮುಖ ಬೆಳೆವಣಿಗೆಯ ಕೇಂದ್ರ

ಆಲೂರು : ಅಂಗನವಾಡಿ ಕೇಂಧ್ರಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗಳ ಕೇಂದ್ರಗಳಾಗಿವೆ ಎಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳಾ ಉಪ ನಿರ್ದೇಶಕಿ ಶ್ರೀಮತಿ ಪದ್ಮ ತಿಳಿಸಿದರು,

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಏರ್ಪಡಿಸಿದ್ದ ಬಾಲ ಮೇಳ ಮತ್ತು ಪೌಷ್ಟಿಕ ಆಹಾರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು, ಅಂಗನವಾಡಿ ಕೇಂದ್ರಗಳು ಪ್ರಾರಂಭವಾಗಿ 42 ವರ್ಷಗಳು ಕಳೆದಿವೆ ಈ ಕೇಂದ್ರಗಳಲ್ಲಿ ನಡೆಯುವ ಚಟುವಟಿಗಳು ಮಕ್ಕಳ ಬೌತಿಕ ಬೆಳೆವಣಿಗೆಗೆ ಪೂರಕವಾಗಿವೆ, ಅಲ್ಲದೆ ಒಂದು ಮಗುವಿನ ಜನನದ ಮುಚ್ಚಿನಿಂದ ಹಾಗು ನಂತರದ 6 ವರ್ಷಗಳವರೆಗೂ ತಾಯಿ ಮತ್ತು ಮಗುವಿನ ಆರೋಗ್ಯದ ಬಗ್ಗೆ ಗಮನಿಸಲಾಗುವುದು, ಈ ಗರ್ಭಿಣಿ, ಬಾಣಂತಿಯರಿಗೆ ಅಂಗನವಾಡಿ ಕೆಂದ್ರದಲ್ಲಿ ಅ.2 ರಿಂದ ಮದ್ಯಾಹ್ನ ಪೌಷ್ಟಿಕತೆಯಿಂದ ಕೂಡಿದ ಬಿಸಿಯೂಟ ನೀಡಲಾಗುವುದು ಗರ್ಭಿನಿಯರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು,

ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಎ. ಟಿ. ಮಲ್ಲೇಶ್ ಮಾತನಾಡಿ ಗರ್ಭಿಣಿಯರು, ಬಾಣಂತಿಯರು ಹಾಗು ಅಪೌಷ್ಟಿಕ ಮಕ್ಕಳು ತಾವು ಸೇವಿಸುವಂತಹ ಆಹಾರ ಪದಾರ್ಥಗಳ ಬಗ್ಗೆ ನಿಗಾ ಇರಬೇಕು ಏಕೆಂದರೆ ತಾವು ಸೇವಿಸುವಂತಹ ಆಹಾರ ಪದಾರ್ಥಗಳಿಂದ ತಮ್ಮ ಆರೋಗ್ಯ ಸುದಾರಣೆಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು,

ಈ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಯಾಗಿ ಬಾಗವಹಿಸಿದ್ದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅದ್ಯಕ್ಷರು ಹಾಗು ನಿವೃತ್ತ ಪರ್ತಕರ್ತರಾದ ಗುಲಾಂಸತ್ತಾರ್ ಮಾತನಾಡಿ, ಸಮಾಜದಲ್ಲಿ ಅಂಗನವಾಡಿ ಆಶಾ ಕಾರ್ಯಕರ್ತೆಯ ಕೆಲಸ ಬಹಳ ಮಹತ್ವದ ಕೆಲಸವಾಗಿದ್ದು ಸರ್ಕಾರ ಇವರ ಕೆಲಸಕ್ಕೆ ನೀಡುತ್ತಿರುವ ಗೌರವಧನವನ್ನು ಹೆಚ್ಚಿಸಬೇಕು ಅಲ್ಲದೆ ಅಗತ್ಯವಿರುವ ಮೂಲ ಭೂತ ಸೌಕರ್ಯಗಳನ್ನು ಗ್ರಾ ಪಂ ಮಟ್ಟದಿಂದಲು ಒದಗಿಸಬೇಕು ಎಂದು ತಿಳಿಸಿದರು,

ಅಂಗನವಾಡಿಯಲ್ಲಿ ವ್ಯಾಸಂಗ ಮಾಡುತ್ತಿರುವ 3 ರಿಂದ 6 ವಯೋಮಿತಿಯೊಳಗಿನ ಸುಮಾರು ನೂರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು,

ಜಿಲ್ಲಾ ಮಹಿಳಾ ಮತ್ತು ಮಕ್ಕಳಾ ಉಪ ನಿರ್ದೇಶಕಿ ಪದ್ಮ, ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಎ. ಟಿ. ಮಲ್ಲೇಶ್,ಪ.ಪಂ. ಮುಖ್ಯಾದಿಕಾರಿ ಕೃಷ್ಣಮೂರ್ತಿ, ತಾಲೂಕು ದೈಹಿಕ ಪರೀವಿಕ್ಷಕ ನಾಗರಾಜು, ಆರೋಗ್ಯ ಇಲಾಖೆ ಸತೀಶ್, ಕದಾಳು ಗ್ರಾ.ಪಂ. ಉಪಾದ್ಯಕ್ಷ ರಾಜಣ್ಣ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅದ್ಯಕ್ಷರು ಹಾಗು ನಿವೃತ್ತ ಪರ್ತಕರ್ತರಾದ ಗುಲಾಂ ಸತ್ತಾರ್, ಧರಣೇಶ್, ದೈಹಿಕ ಶಿಕ್ಷಕ ಪರಿವೀಕ್ಷಕ ನಾಗರಾಜು, ತಾಲೂಕು ಮಹಿಳಾ ಮತ್ತು ಮಕ್ಕಳಾ ಮೆಲ್ವಚಾರಕಿ ವಿಜಯ, ಹಾಗು ಅಂಗನವಾಡಿ ಶಿಕ್ಷಕಿಯರು ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು,

ಗೌರಿಲಂಕೇಶ್ ಹತ್ಯೆ ಖಂಡಿಸಿ – ಪ್ರತಿಭಟನೆ

ಬಹುಜನ ವಿದ್ಯಾರ್ಥಿ ಸಂಘ
ಪ್ರತಿಭಟನೆ

ಬೇಲೂರು, ಸೆ.12– ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯನ್ನು ಖಂಡಿಸಿ ಮತ್ತು ಹತ್ಯೆಗೈದವರನ್ನು ಬಂಧಿಸುವಂತೆ ಆಗ್ರಹಿಸಿ ಇಲ್ಲಿನ ಬಹುಜನ ವಿದ್ಯಾರ್ಥಿ ಘಟಕ ರಸ್ತೆತಡೆ ನಡೆಸಿ ಪ್ರತಿಭಟಿಸಿದರು.

ಈ ಸಂದರ್ಭ ಮಾತನಾಡಿದ ಬೆಳ್ತಂಗಡಿಯ ಡಾ.ಅಂಬೇಡ್ಕರ್‌ವಾದಿ ದಮ್ಮಾನಂದ್, ಈ ಘಟನೆ ಇಡಿ ದೇಶವನ್ನೆ ಬೆಚ್ಚಿಬೀಳಿಸಿದೆ. ಎಡಪಂಥೀಯ ನೇರ ನುಡಿಯ ವಿಚಾರವಾದಿಗಳು ಗೌರಿಯವರಾಗಿದ್ದರು. ರಾಷ್ಟ್ರ ಮಟ್ಟದ ಪ್ರಗತಿಪರ ಚಿಂತಕರೂ ಆದ ಗೌರಿಲಂಕೇಶ್ ಹತ್ಯೆ ನಾಡಿನ ಶೋಷಿತರ, ಧಾರ್ಮಿಕ ಅಲ್ಪಸಂಖ್ಯಾತರ, ಹಿಂದುಳಿದ ಸಮಾಜದ ಧ್ವನಿಯಾಗಿದ್ದರು ಇಂತಹವರ ಹತ್ಯೆ ನೀಚತನದ್ದು ಎಂದು ಕಿಡಿಕಾರಿದರು.

ತಾ॥ ಸಂಯೋಜಕ ಶಶಿಧರ್ ಮೌರ್ಯ ಮಾತನಾಡಿ, ಪ್ರಜಾಪ್ರಭುತ್ವ ದೇಶದಲ್ಲಿ ಈ ರೀತಿಯ ಕಗ್ಗೊಲೆ ನಡೆಯುತ್ತಿರುವುದು ಖಂಡ ನೀಯ. ಗೌರಿಲಂಕೇಶ್ ಮೂಡ ನಂಬಿಕೆ, ಕಂದಾಚಾರ, ಕೋಮುವಾದ, ಮನುವಾದ ಹಾಗೂ ಮಾನಸಿಕ ಭಯೋತ್ಪಾದಕರ ವಿರುದ್ಧ ಸಿಡಿದೇಳುತ್ತಿ ದ್ದವರು. ಹಿಂದೆ ಪ್ರಗತಿಪರ ಚಿಂತಕ ದಾಬೋಲ್ ಕರ್‌ಫನ್ಸಾರ್‌ಕಲ್ಬುರ್ಗಿ ಇದೀಗ ಗೌರಿಲಂಕೇಶ್ ಗುಂಡೇಟಿಗೆ ಬಲಿಯಾಗಿದ್ದಾರೆ.ಸಮಾಜದ ಪರ ಚಿಂತನೆ ಮಾಡುವವರ ಸ್ಥಿತಿ ಹೀಗಾದರೆ ಹೇಗೆ ಎಂದು ಪ್ರಶ್ನಿಸಿದರು.

ತಹಸೀಲ್ದಾರ್ ಕಚೇರಿಗೆ ತೆರಳಿ ಮನವಿ ಪತ್ರ ಅರ್ಪಿಸಲಾಯಿತು. ಟಿಪ್ಪುಸೇನೆಯ ತಾ.ಅಧ್ಯಕ್ಷ ನೂರ್‌ಅಹ್ಮದ್, ಚಿಕ್ಕಮಗಳೂರು ತಾಲ್ಲೂಕು ಬಿವಿಎಸ್ ಸಂಚಾಲಕ ವಿರೂಪಾಕ್ಷ, ಪ್ರಮುಖರಾದ ಅಲ್ತಾಫ್, ತಾರಾನಾಥ್, ವಿವೇಕಾನಂದ, ಸರಕಾರಿ ಪದವಿಪೂರ್ವಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಿಶೇಷ ಉಪನ್ಯಾಸ ಕಾರ್ಯಕ್ರಮ

ಹಾಸನ ಸೆ. 12: ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಪತ್ರಿಕೋದ್ಯಮ ವಿಷಯವನ್ನು ಕಲಿಯುವುದರಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ವಿಫುಲವಾದ ಅವಕಾಶಗಳು ದೊರೆಯುತ್ತವೆ ಎಂದು ಪತ್ರಕರ್ತರಾದ ನಾಗರಾಜ್ ಹೆತ್ತೂರುರವರು ಅಭಿಪ್ರಾಯಪಟ್ಟರು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ ಪತ್ರಿಕೋದ್ಯಮ ವಿಭಾಗದಿಂದ ಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಾ ವಿದ್ಯಾರ್ಥಿಗಳು ಪತ್ರಿಕೋದ್ಯಮ ವಿಷಯವನ್ನು ಓದುವುದರ ಜೊತೆಗೆ ಬರವಣಿಗೆ ಕೌಶಲ್ಯವು ಹೆಚ್ಚಾಗುತ್ತದೆ. ಜೊತೆಗೆ ಸಮಾಜದಲ್ಲಿನ ಅವ್ಯವಸ್ಥೆಯ ಬಗ್ಗೆ ಪ್ರಶ್ನೆ ಮಾಡುವ ಸಾಮರ್ಥ್ಯ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ನಂತರ ಕಾಲೇಜಿನ ಪ್ರಾಂಶುಪಾಲರಾದ ಡಾ.ಲಲಿತಾದೇವಿ ಹೆಚ್.ಕೆ. ಅವರು ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳು ಪತ್ರಿಕೋದ್ಯಮ ವಿಷಯದ ಕಲಿಕೆಯಲ್ಲಿ ನಿರಾಸಕ್ತಿ ತೋರಿಸುತ್ತಿದ್ದು ವಿಷಯದ ಬಗ್ಗೆ ಮಾಹಿತಿಯ ವಂಚಿತರಾಗಿದ್ದಾರೆ. ಆದುದರಿಂದ ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಪತ್ರಿಕೋದ್ಯಮ ವಿಷಯದ ಆಯ್ಕೆಯ ಜೊತೆಗೆ ತಮ್ಮ ಬರವಣಿಗೆಯಲ್ಲಿ ಸೃಜನಶೀಲತೆಯನ್ನು ಬೆಳೆಸಿಕೊಳ್ಳುವ ದಾರಿಯನ್ನು ಹಿಡಿಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ವರದಿಗಾರರಾದ ವಿಜಿಕುಮಾರ, ಸಹಾಯಕ ಪ್ರಾಧ್ಯಾಪಕರಾದ ನಂದುಕುಮಾರ್ ವಿ., ಉಪನ್ಯಾಸಕಿ ರಶ್ಮಿ ಎ.ವಿ., ಉಪನ್ಯಾಸಕ ಸತೀಶ್ ಅತ್ನಿ ಉಪಸ್ಥಿತರಿದ್ದರು.

ಗೂಡಂಗಡಿಗಳ ತೆರವು– ಹಿಂದೆ ಟೆಂಡರ್ ಮಾಫಿಯಾ

WORKING JOURNALISTS (R)
SAKALESHPUR 573 134

ಸಕಲೇಶಪುರ: ತಾಲೂಕಿನ ಆನೆಮಹಾಲ್ ಗ್ರಾಮ ಪಂಚಾಯಿತಿಗೆ ಸೇರಿದವರು ಟೆಂಡರ್ ಮಾಫಿಯಾ ನಡೆಸುವ ಉದ್ದೇಶದಿಂದ ದೋಣಿಗಾಲದಲ್ಲಿ ಪೆಟ್ಟಿಗೆ ಅಂಗಡಿಗಳನ್ನು ತೆರವು ಮಾಡಿದ್ದಾರೆಯೇ ಹೊರತು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಅಲ್ಲ ಎಂದು ಗೂಡಂಗಡಿ ವರ್ತಕರ ಹೋರಾಟ ಸಮಿತಿ ಮುಖಂಡ ಸಿದ್ದಿಖ್ ಆನೆಮಹಾಲ್ ಆರೋಪಿಸಿದರು.

ಪಟ್ಟಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಕಳೆದ ಶನಿವಾರ ಆನೆಮಹಾಲ್ ಗ್ರಾಪಂ ಅಧಿಕಾರಿಗಲು ದೋಣಗಾಲದಲ್ಲಿದ್ದ ಸುಮಾರು 22 ಗೂಡಂಗಡಿಗಳನ್ನು ಅನಧಿಕೃತ ಎಂದು ಏಕಾಏಕಿ ತೆರವು ಮಾಡಿದ್ದಾರೆ. ಆದರೆ ಈ ಅಂಗಡಿಗಳ ಮಾಲೀಕರು ವಿದ್ಯುತ್ ಬಿಲ್, ಕಂದಾಯ ಪಾವತಿ ಮಾಡುತ್ತಿದ್ದುದಲ್ಲದೆ ಎನ್‌ಓಸಿ ಸಹ ಪಡೆದುಕೊಮಡಿರುತ್ತಾರೆ. ಈ ಕಾರ್ಯಾಚರಣೆ ದುರುದ್ದೇಶ ಪುರಿತವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಸುಮಾರು 20 ವರ್ಷಗಳಿಂದ ಗುಡಂಗಡಿಗಳನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದ ಬಡ ವರ್ತಕರು ಈಗ ಬಿದಿಗೆ ಬಿದ್ದಿದ್ದಾರೆ.ತೆರವು ಕಾರ್ಯಾಚರಣೆ ಮಾಡುವ ಮೊದಲು ಯಾರಿಗೂ ಸಹ ಲಿಖಿತ ಮಾಹಿತಿ ನೀಡಿಲ್ಲ. ನಸುಕಿನ ವೇಳೆ ಜೆಸಿಬಿ ಸಹಿತ ಬಂದ ಅಧಿಕಾರಿಗಳು ಪೊಲೀಸ್ ರಕ್ಷಣೆಯೊಂದಿಗೆ ಅಂಗಡಿಗಳಲ್ಲಿದ್ದ ಸಮಾನು ಸರಂಜಾಮುಗಳ ಸಹಿತ ಗೂಡಂಗಡಿಗಳನ್ನು ತೆರವು ಮಾಡಿದ್ದಾರೆ. ಇದರಿಂದಾಫಿ ಗೂಡಂಗಡಿ ಮಾಲೀಕರಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ ಎಂದರು.

ಇತ್ತೀಚೆಗೆ ಹೊರ ಊರುಗಳಿಂದ ಬಂದು ಅನಧಿಕೃತವಾಗಿ ಗುಡಂಗಡಿ ಮಾಡಿಕೊಂಡಿದ್ದ ಕೆಲವರಿಂದ ಈ ಪ್ರದೇಶದಲ್ಲಿ ಅಶುಚಿತ್ವ, ಗ್ರಾಹಕರೊಂದಿಗೆ ಅಸಭ್ಯ ವರ್ತನೆ ಮೊದಲಾದ ಕಾನುನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದವು. ಇಂತಹವರನ್ನು ಕರೆಸಿ ವಿಚಾರಿಸಿ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳು ನ್ಯಾಯಯುತವಾಗಿ ವ್ಯಾಪಾರ ನಡೆಸುತ್ತಿದ್ದವರ ವಿರುದ್ಧ ನಡೆದುಕೊಮಡಿದ್ದು ಸರಿಯಲ್ಲ. ಗ್ರಾಪಂ ವತಿಯೊಂದ ಹೈಟೆಕ್ ಶೌಚಾಲಯ,ವಾಣಿಜ್ಯ ಸಂಕೀರ್ಣ ಮಾಡಿಕೊಳ್ಳಲಿ. ಆದರೆ ಈಗ ಸಂತ್ರಸ್ಥರಾಗಿರುವ ವರ್ತಕರಿಗೆ ಹೊಸ ಕಟ್ಟಡದಲ್ಲಿ ಸ್ಥಳಾವಕಾಶ ಕೊಡುವ ಲಿಖಿತ ಭರವಸೆ ನೀಡಿ ಮುಂದುವರೆಯಲಿ. ಇಲ್ಲವಾದರೆ ಕಾನುನು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು,

ಗೂಡಂಗಡಿ ವರ್ತಕರ ಹೋರಾಟ ಸಮಿತಿ ಅಧ್ಯಕ್ಷ ಮಂಜುನಾಥ್, ರಫೀಕ್, ರಿಯಾಜ್, ಗ್ರಾಪಂ ಮಾಜಿ ಸದಸ್ಯೆ ಮಣಿ ಮೋಹನ್ ಇದ್ದರು.

ಲೈಂಗಿಕ ದುರಾಚಾರ : ಉನ್ನತಮಟ್ಟದ ಸಭೆ

ನವದೆಹಲಿ, ಸೆ.12– ದೇಶದ ವಿವಿಧೆಡೆ ಶಾಲೆಗಳಲ್ಲಿ ಮಕ್ಕಳ ಮೇಲೆ ಹೆಚ್ಚುತ್ತಿರುವ ಲೈಂಗಿಕ ದುರಾಚಾರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ ನಾಳೆ ರಾಜಧಾನಿ ದೆಹಲಿಯಲ್ಲಿ ಉನ್ನತಮಟ್ಟದ ಸಭೆ ಕರೆದಿದೆ.

ಈ ಮಹತ್ವದ ಸಭೆಯಲ್ಲಿ ಶಾಲಾ ಮಕ್ಕಳ ಸುರಕ್ಷತೆಗಾಗಿ ಕೆಲವು ಪ್ರಮುಖ ಮಾರ್ಗಸೂಚಿಗಳ ಅನುಷ್ಠಾನ ಕುರಿತು ಚರ್ಚಿಸಿ ನಿರ್ಧಾರ ಕೈಗೊಳ್ಳುವ ನಿರೀಕ್ಷೆ ಇದೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೇನಕಾ ಗಾಂಧಿ,ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವ್ಡೇಕರ್ ಸಭೆ ಕರೆದಿದ್ದಾರೆಂದು ಉನ್ನತಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹರಿಯಾಣದ ಗುರುಗ್ರಾಮದ ರಯಾನ್ ಇಂಟರ್ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿ ಪ್ರದ್ಯುಮ್ನ ಹತ್ಯೆ ಪ್ರಕರಣದಲ್ಲಿ ಕೇಂದ್ರಕ್ಕೆ ಸುಪ್ರೀಂಕೋರ್ಟ್ ನೋಟಿಸ್ ಜಾರಿಗೊಳಿಸಿದ ಬೆನ್ನಲ್ಲೇ ನಾಳೆ ನಡೆಯಲಿರುವ ಸಭೆ ಪ್ರಾಮುಖ್ಯತೆ ಪಡೆದುಕೊಂಡಿದೆ. ಉನ್ನತ ಮಟ್ಟದ ಸಭೆಯಲ್ಲಿ ಎನ್‌ಸಿಪಿಸಿಆರ್, ಸಿಬಿಎಸ್‌ಇ, ಎನ್‌ಸಿಇಆರ್‌ಟಿ, ಕೇಂದ್ರೀಯ ವಿದ್ಯಾಲಯ ಸಂಘಟನೆಯ ಉನ್ನತಾಧಿಕಾರಿಗಳು ಭಾಗವಹಿಸಲಿದ್ದಾರೆ.

ಸೆ.17ರಂದು ವಿಶ್ವ ಕರ್ಮ ಜಯಂತೋತ್ಸವ

ಚ.ರಾ.ಪ : ಸೆ: 17 ರಂದು ವಿಶ್ವ ಕರ್ಮ ಜಯಂತೋತ್ಸವ ಕಾರ್ಯಕ್ರಮ ಕಾಳಿಕಾಂಭ ದೇವಾಲಯದಲ್ಲಿ ನಡೆಯಲಿದೆ ಎಂದು ತಾ॥ ವಿಶ್ವಕರ್ಮ ಸಮಾಜದ ಅಧ್ಯಕ್ಷ ಮಂಜೂರಾಚಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ, ಅವರು ಈ ಬಗ್ಗೆ ತಿಳಿಸಿ ಅನೇಕ ಗಣ್ಯರು ಸಂಸದ ಹೆಚ್.ಡಿ.ದೇವೇಗೌಡರು, ಶಾಸಕ ಸಿ.ಎನ್.ಬಾಲಕೃಷ್ಣ, ಎಂ.ಎಲ್.ಸಿ. ಗೋಪಾಲಸ್ವಾಮಿ, ಸಚಿವ ಎ.ಮಂಜು ಭಾಗವಹಿಸಲಿದ್ದಾರೆ. ಸಮಾಜದ ಮುಖಂಡ ಸಿ.ನಟರಾಜ್, ಮುಖ್ಯ ಭಾಷಣ ಮಾಡುವರು ಸಮಾಜದಗಣ್ಯರು ಕಲಾಶಿಲ್ಪಿಗಳು ಪ್ರತಿಭಾವಂತರನ್ನ ಕಲಾವಿದರನ್ನ ಸನ್ಮಾನಿಸಲಾಗುತ್ತಿದೆ ಎಂದರು.

ಸಮಾಜದ ಮುಖಂಡರಾದ ಶ್ರೀಕಂಠಾಚಾರ್, ರಂಗಸ್ವಾಮಿ, ನರಸಿಂಹಮೂರ್ತಿ, ಸುರೇಶ್, ವೇಣು ಮೊದಲಾವದವರು ಇದ್ದರು.

ಹಿತರಕ್ಷಣಾ ಸಮಿತಿಯ ತ್ರೈಮಾಸಿಕ ಸಭೆ

ಹಾಸನ ಸೆ. 12:

2017–18ನೇ ಸಾಲಿನ, ಸಕಲೇಶಪುರ ತಾಲ್ಲೂಕು ಮಟ್ಟದ ಪ.ಜಾತಿ/ವರ್ಗದ ಜಾಗೃತಿ ಮತ್ತು ಹಿತರಕ್ಷಣಾ ಸಮಿತಿಯ ಪ್ರಥಮ ತ್ರೈಮಾಸಿಕ ಸಭೆಯನ್ನು ಸೆ.16 ರಂದು ಬೆಳಗ್ಗೆ 11 ಗಂಟೆಗೆ ತಾಲ್ಲೂಕು ಪಂಚಾಯಿತಿ ಸಭಾಂಗಣ, ತಹಸೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಸಾರ್ವಜನಿಕರು/ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಭೆಗೆ ಹಾಜರಾಗಿ ಪ.ಜಾತಿ/ವರ್ಗಗಳ ಜನರ ಕುಂದು ಕೊರತೆಗಳ ಕುರಿತು ಸಲಹೆ–ಸೂಚನೆಗಳನ್ನು ನೀಡಬೇಕಾಗಿ ಕೋರಿದೆ.

ಉತ್ತಮ ಸಂಸ್ಕಾರದಿಂದ ಮಾತ್ರ ಉತ್ತಮ ಪ್ರಜೆಗಳಾಗಲು ಸಾಧ್ಯ

ಚನ್ನರಾಯಪಟ್ಟಣ : ಪಟ್ಟಣದ ಶಾಲಿನಿ ವಿದ್ಯಾ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ಶಾಲ ಸಂಸ್ಥಾಪಕ ನಂಜುಂಡೇಗೌಡರ 86 ನೇ ವರ್ಷದ ಜನ್ಮ ಜಯಂತಿ ಅಂಗವಾಗಿ ಶಾಲೆಯ 86 ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ಲೇಖನ ಸಾಮಾಗ್ರಿ ಸಿಹಿ ಹಾಗೂ ಗಿಡಗಳನ್ನ ವಿತರಿಸುವ ಕಾರ್ಯಕ್ರಮಕ್ಕೆ ಹಾಸನದ ಉಪವಿಭಾಗಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಚಾಲನೆ ನೀಡಿದರು.

ಶಾಲೆಯಲ್ಲಿ 10 ವರ್ಷಗಳಿಂದ ಶಿಕ್ಷಕರಾಗಿ ಸೇವೆ ಮಾಡುತ್ತಿರುವ ಶ್ರೀಮತಿ ಲತಾ ಪುಟ್ಟೇಗೌಡ ಹಾಗೂ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುವ ಚಿದಾನಂದ ಅವರನ್ನ ಶಾಲೆಯ ವಿದ್ಯಾರ್ಥಿಗಳು ವಿದ್ಯಾಸಂಸ್ಥೆ ಗೌರವಿಸಿತು.

86 ವರ್ಷದ ಶಾಲಿನಿ ವಿದ್ಯಾ ಸಂಸ್ಥೆಯ ಸಂಸ್ಥಾಪಕ ನಂಜುಂಡೇಗೌಡರಿಗೆ ಸನ್ಮಾನವನ್ನ ಶಿಕ್ಷಕರು ಗಣ್ಯರಿಂದ ಪಡೆದು ಮಾತನ್ನಾಡಿ ಮಕ್ಕಳಿಗೆ ಉತ್ತಮ ಶಿಕ್ಷಣ ಸಂಸ್ಕಾರ ಮೌಲ್ಯಗಳನ್ನ ನೀಡುವ ದೃಷ್ಠಿಯಿಂದ ಶಿಕ್ಷಣ ಸಂಸ್ಥೆ ಆರಂಭಿಸಿದೆ. ಶಿಸ್ತು ಆದರ್ಶ ಪಾಲನೆಯಿಂದ ಸಮಾಜದ ಉತ್ತಮ ಪ್ರಜೆಗಳಾಗಿ ಎಂದರು.

ಮುಖ್ಯ ಅತಿಥಿ ಸ್ಥಾನದಿಂದ ಡಾ.ಹೆಚ್.ಎಲ್.ನಾಗರಾಜು ಮಾತನ್ನಾಡಿ ಸಮಾಜದಲ್ಲಿ ರೈತ ಸೈನಿಕ ಶಿಕ್ಷಕನ ಪಾತ್ರ ಪ್ರಮುಖವಾದದ್ದು ಸಮಾಜದಲ್ಲಿ ಭವಿಷ್ಯ ರೂಪಿಸುವ ವಿದ್ಯಾರ್ಥಿ ಗಳು ತಪ್ಪು ಎಸಗಬಾರದೆಂದು ಬಾಲ್ಯದಲ್ಲೇ ಶಿಕ್ಷಕ ಮಕ್ಕಳು ಶಿಕ್ಷೆ ನೀಡುತ್ತಾನೆ ಶಿಕ್ಷೆ ಎನ್ನುವುದು ಶಿಕ್ಷಕ ಶಿಕ್ಷೆ ನೀಡುವುದು ಸಮಾಜ ದಲ್ಲಿ ತಪ್ಪು ಆಗಬಾರದು ಎಂಬ ದೃಷ್ಠಿಯಿಂದ ಯಾವುದೇ ಶಿಕ್ಷಕ ಉದ್ದೇಶ ಪೂರ್ವಕವಾಗಿ ಮಕ್ಕಳಿಗೆ ಶಿಕ್ಷೆ ನೀಡಲಾರ ನಿಶ್ಕಮ್ಲಶ ಭಾವನೆ ಶಿಕ್ಷಕನಾಗಿದೆ ಎಂದರು.

ಬಿ.ಇ.ಒ. ಪುಷ್ಪಲತಾ ಮಾತನಾಡಿ, ಸ್ವರಚಿತ ಕವನ ವಾಚಿಸಿದರು ಗಣ್ಯರಾದ ಜಯಮ್ಮ, ಮಾಜಿ ಪುರಸಭಾಧ್ಯಕ್ಷ ಸಿ.ನಾಗರಾಜು, ಸಿ.ಎನ್.ಶಶಿಧರ್, ಪರಿಸರ ಪ್ರೇಮಿ ಸಿ.ಎನ್. ಅಶೋಕ್, ಮುಖ್ಯ ಶಿಕ್ಷಕಿ ಮಮತಾ, ಪ್ರಕಾಶ್ ಜೈನ್, ಲ.ನಾ. ಗುಪ್ತಾ ನೀಲಾ ಸ್ವಾಮಿ, ಚಂದ್ರ ಬಾಬು ಮುಂತಾದವರಿದ್ದರು.

ಎನ್‌ಎಸ್‌ಎಸ್ ವಿಭಾಗದ ಉದ್ಘಾಟನೆ

ಸೇವಾ ಮನೋಭಾವ ಬೆಳಿಸಿಕೊಳ್ಳಿ

ಹಾಸನ ಸೆ. 12– ಯುವಕರು ವಿದ್ಯಾಭ್ಯಾಸದ ಅವಧಿಯಲ್ಲಿ ಸೇವಾ ಮನೋಭಾವನೆಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಮೋಹನ್ ಕುಮಾರ್ ಹೇಳಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ವಿಭಾಗದ ವತಿಯಿಂದ 2017/18ನೇ ಸಾಲಿನ ಚಟುವಟಿಕೆಗಳನ್ನು ಸಸಿ ನೆಡುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯ ಇಂದು ಒತ್ತಡದಲ್ಲಿ ಬದುಕುತ್ತಿದ್ದಾನೆ, ಸಮಾಜ ಸೇವೆಯಲ್ಲಿ ತೊಡಗುವುದರಿಂದ ಒತ್ತಡವನ್ನು ನಿವಾರಿಸಿಕೊಳ್ಳಬಹುದು.ಸಮಾಜ ಸೇವೆ ಮಾಡುವುದರಿಂದ ಧನ್ಯತೆಯ ಭಾವನೆ ಮೂಡುತ್ತದೆ.

ಯುವಕರು ಇಂದು ಕೇವಲ ಪುಸ್ತಕದ ಹುಳುಗಳಾಗುತ್ತಿದ್ದಾರೆ, ಸಮಾಜದ ಆಗುಹೋಗುಗಳ ಬಗ್ಗೆ ಅವರಿಗೆ ಅರಿವಿಲ್ಲದಂತಾಗಿದೆ ಎಂದು ಹೇಳಿದರು.

ಎನ್.ಎಸ್.ಎಸ್. ಅಧಿಕಾರಿ ರಾಧಕೃಷ್ಣ ಮಾತನಾಡಿ, ಗಾಂಧೀಜಿ ಅವರ ಕನಸಿನ ಕೂಸಾದ ರಾಷ್ಟ್ರೀಯ ಸೇವಾ ಯೋಜನೆಯನ್ನು ಸದೃಢವಾಗಿ ಜಾರಿಗೆ ತರಲು ಯುವಕರು ಶ್ರಮಿಸಬೇಕು. ಯುವಕರು ಗ್ರಾಮೀಣ ಭಾಗದ ಜನರಿಗೆ ಸರಕಾರದ ಸೌಲಭ್ಯಗಳನ್ನು ತಿಳಿಸಿಕೊಡುವ ಮೂಲಕ ಗ್ರಾಮೀಣ ಜನರನ್ನು ಜಾಗೃತರನ್ನಾಗಿ ಮಾಡಬೇಕು ಎಂದು ತಿಳಿಸಿದರು.

ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಹಾಗೂ ವಿವಿಧ ವಿಭಾಗದ ಅಧ್ಯಾಪಕರು ಹಾಜರಿದ್ದರು.

ಕ್ರೀಡಾಕೂಟ: ವಿಜಯ ಶಾಲೆಗೆ ಸಮಗ್ರ ಪ್ರಶಸ್ತಿ

ಕವನ ಎಂ. ಗೌಡಗೆ ಚಾಂಪಿಯನ್‌ಶಿಪ್

ಹಾಸನ, ಸೆ.12– ಸಾರ್ವಜನಿಕ ಶಿಕ್ಷಣಾ ಇಲಾಖೆ ವತಿಯಿಂದ ನಡೆಸಲಾದ 17 ವರ್ಷ ವಯೋಮಿತಿಯ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ವಿಜಯ ಶಾಲೆಯ ಬಾಲಕ ಬಾಲಕಿಯರು ಸಮಗ್ರ ಪ್ರಶಸ್ತಿ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕವನ ಎಂ.ಗೌಡ ☐ 100 ಮೀ ಮತ್ತು 200 ಮೀ. ರನ್ನಿಂಗ್ ರೇಸ್ ಹಾಗೂ 4*100 ಮೀ. ರಿಲೇ ಪ್ರಥಮ, ಲಾಂಗ್ ಜಂಪ್ ☐ ತೃತೀಯ ಬಹುಮಾನ ಪಡೆದು ವೈಯಕ್ತಿಕ ಚಾಂಪಿಯನ್‌ಶಿಪ್ ಪಡೆದಿದ್ದಾಳೆ.

ಭೂಮಿಕಾ ಎಸ್. ತಗಡೂರು ☐ ಜಾವಲಿನ್ ಥ್ರೋ, ಶಾಟ್‌ಪುಟ್ – ಪ್ರಥಮ, ಡಿಸ್ಕ್ ಥ್ರೋ ☐ ತೃತೀಯ; \ಯೋಗೇಶ್ ಗೌಡ– ಶಾಟ್ ಪುಟ್‌ನಲ್ಲಿ ತೃತೀಯ; ನಿಖಿಲ್ ಸಿ – ಹ್ಯಾಮರ್ ಥ್ರೋ ☐ ದ್ವಿತೀಯ; ಶಶಾಂಕ್ ಗೌಡ ಹೆಚ್.ಆರ್ ☐ 200 ಮೀ ರನ್ನಿಂಗ್ ರೇಸ್ – ಪ್ರಥಮ; ಸಮರ್ಥ–200 ಮೀ ರನ್ನಿಂಗ್ ರೇಸ್ – ದ್ವಿತೀಯ ಸ್ಥಾನ ಗಳಿಸಿದ್ದಾರೆ. ಅನಿತಾ, ಭೂಮಿಕಾ ಎಂ, ಪರಿಣಿತ ಹೆಚ್.ಜಿ, ಸಮರ್ಥ ಹೆಚ್.ವಿ, ಶಶಾಂಕ್ ಗೌಡ ಹೆಚ್.ಆರ್,

ವರುಣ್ ಗೌಡ ಜಿ.ಓ ಮತ್ತು ಸುನೀಲ್ ವಿ.ಜೆ 4*100 ರಿಲೇ – ಪ್ರಥಮ ಸ್ಥಾನ ಪಡೆದಿದ್ದಾರೆ.

ಯಶಸ್ ಎಂ.ಎನ್., ಕೃತಾರ್ಥ ಆರ್.,ಅಂಚಿತ್ ಗೌಡ ಬಿ.ಸಿ.,ಕರಣ್‌ಪಿ., ಗೌತಮ್, ಹೇಮಂತ್ ಹೆಚ್.ಎಸ್., ಸುನೀಲ್‌ವಿ.ಜೆ., ಸಾತ್ವಿಕ್ ಯು.ಆರ್.ವರುಣ್‌ಗೌಡ ಜಿ.ಓ., ಧನುಷ್ ಹೆಚ್. ಕೆ., ಕೇಶವ್ ಪಟೇಲ್, ಲಕ್ಷ್ಮೀಕಾಂತ್ – ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ, ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

ಅಮಾನತ್ತು

ಹಾಸನ: ಪ್ರಿಮೆಟ್ರಿಕ್ ಬಾಲಕರ ವಿದ್ಯಾರ್ಥಿ ನಿಲಯದ ಮೇಲ್ವಿಚಾರಣೆ, ದಾಖಲಾತಿಗಳ ನಿರ್ವಹಣೆ, ವಿದ್ಯಾರ್ಥಿಗಳ ಹಾಜರಾತಿ ನಿರ್ವಹಣೆ ಮಾಡದಿರುವುದು, ನಿಲಯಾರ್ಥಿಗಳು ಮಲಗುವ ಕೊಠಡಿ ಗಳಲ್ಲಿ ಸ್ವಚ್ಛತೆ ಇಲ್ಲದಿರುವುದು, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಕೈಪಿಡಿ,ಸರ್ಕಾರದ ಸುತ್ತೋಲೆ/ಆದೇಶ ಗಳನ್ನು ಉಲ್ಲಂಘಿಸಿ, ಕರ್ತವ್ಯಲೋಪ ವೆಸಗಿ ರುವುದರಿಂದ ಹೆಚ್.ಎಸ್. ದೇವರಾಜು, ನಿಲಯ ಮೇಲ್ವಿಚಾರಕರನ್ನು ಜಿ.ಪಂ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಕೆ.ಎಂ. ಜಾನಕಿ ಕೆ. ಎ.ಎಸ್. ರವರು ಸೇವೆ ಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ.

ಕಾಗೆ ಸಾಕಿದ ಗೆಳೆಯರು....!

ಚಿಕ್ಕೋಡಿ: ನವಿಲು, ಗಿಣಿ ಸಾಕುವುದನ್ನು ನೋಡಿದ್ದೀರಿ. ಆದ್ರೆ ಕಾಗೆ ಸಾಕುವುದು ಮತ್ತೆ ಅದರಿಂದಲೇ ಹಣ ಗಳಿಸುವುದನ್ನು ನೋಡಿದ್ದೀರಾ? ಇಲ್ಲ ಅಂದ್ರೆ ಈ ಸ್ಟೋರಿ ಓದಿ...

ಯಾರಾದರು ಮೃತಪಟ್ಟರೆ ಧಾರ್ಮಿಕವಾಗಿ ಪಿಂಡ ಪ್ರದಾನ ಮಾಡಿದರೆ ಮೃತನ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂಬ ನಂಬಿಕೆಯಿದೆ. ಮೃತನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಮೃತರ ಕುಟುಂಬಸ್ಥರು ಇಡುವ ಪಿಂಡಪ್ರದಾನವನ್ನು ಕಾಗೆ ಮುಟ್ಟಲೇಬೇಕು ಎಂಬ ಪದ್ಧತಿ ಇದೆ. ಹಲವೆಡೆ ಕಾಗೆ ಮುಟ್ಟುವ ವರೆಗೂ ಜನರು ಶವ ಸಂಸ್ಕಾರ ಮಾಡಿದ ಸ್ಥಳದಲ್ಲೇ ಕಾಯುತ್ತಾ ಕುಳಿತುಕೊಳ್ಳುತ್ತಾರೆ.

ಇದನ್ನು ಮನಗಂಡ ನಾಲ್ವರು ಗೆಳೆಯರು ಕಾಗೆಯನ್ನೇ ಸಾಕುವ ಮೂಲಕ ಅದರಲ್ಲೇ ಉದ್ಯೋಗ ಕಂಡುಕೊಂಡಿದ್ದಾರೆ. ಮಹಾರಾಷ್ಟ್ರದ ನಾಸಿಕದವರಾದ ಇವರು ಕಾಗೆಯನ್ನು ಸಾಕಿ, ಮೃತಪಟ್ಟವರ ಸಂಬಂಧಿಕರಿಂದ 10 ರೂ. ಹಣ ಪಡೆದು ಪಿಂಡಪ್ರದಾನ ಮಾಡುವಾಗ ಕಾಗೆ ಮುಟ್ಟಿಸುತ್ತಾರೆ.

ಇವರು ಗಾಯಗೊಂಡ ಕಾಗೆಯನ್ನು ತಂದು ಅದಕ್ಕೆ ಚಿಕಿತ್ಸೆ ನೀಡಿ ನಂತರ ಕಾಗೆಯನ್ನು ಸಾಕಿ ಇದರಿಂದಲೇ ಹಣ ಸಂಪಾದಿಸುತ್ತಿದ್ದಾರೆ. ಇದನ್ನೇ ವೃತ್ತಿಯಾಗಿಸಿಕೊಂಡಿದ್ದಾರೆ.

ತೊಗಲು ಗೊಂಬೆ ಆಟ ಪ್ರದರ್ಶನ

ಹಾಸನ ಸೆ.12: ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ವತಿಯಿಂದ ಸೆ.11 ರಂದು ಸಕಲೇಶಪುರ ತಾಲೂಕಿನ ಬೆಳಗೊಡು ಗ್ರಾಮದ ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆಯಲ್ಲಿ ತೊಗಲು ಗೊಂಬೆ ಪ್ರದರ್ಶನದ ಮೂಲಕ ಸ್ವಚ್ಚತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು.

Editor, Publisher, Printer, Owner : Leelavathi, Hoysala Prkashana, # 801, 19th Cross, 2nd Main, A Road, Kuvempunagar, Hassan - 573201, Phone : 265898, Managing Editor : A.B. Muruli